ಇ) ದೊಡ್ಡಬಳ್ಳಾಪುರ ಟೌನ್ ಪ್ರೌಢಶಾಲಾ ಮತ್ತು ಪ್ರಥಮ ದರ್ಜೆ ಕಾಲೇಜುಗಳ ಕೊಠಡಿಗಳು ದುರಸ್ತಿ ಕಾಣದೇ ಬೀಳುವ ಹಂತದಲ್ಲಿದ್ದರೂ ದುರಸ್ತಿ ಬಗ್ಗೆ ಯಾವ ಕ್ರಮ ಕೈಗೊಳ್ಳದಿರಲು ಕಾರಣವೇನು;

ಈ) ಕೂಡಲೇ ದುರಸ್ತಿಗಾಗಿ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ 44 ಪ್ರಾಥಮಿಕ ಮತ್ತು 17 ಪ್ರೌಢಶಾಲಾ ಕಟ್ಟಡಗಳ ದುರಸ್ತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಆ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಮೊತ್ತ ರೂ.1.00 ಲಕ್ಷಗಳು.

ಇ) ಪ್ರೌಢಶಾಲಾ ಕೊಠಡಿಗಳ ದುರಸ್ತಿ ಕಾರ್ಯವು ನಡೆದಿದ್ದು ಭಾವಣಿಗೆ ಚುರ್ಕಿ ಹಾಕಲಾಗಿದೆ. ಪ್ರಥಮದರ್ಜೆ ಕಾಲೇಜು ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡದ ದುರಸ್ತಿ ಕಾರ್ಯವನ್ನು 2000-2001ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಈ) ಹೌದು. ಕೈಗೊಳ್ಳಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲ್ಕುಂಟೆ ಆರೋಗ್ಯ ಕೇಂದ್ರದ ಕಟ್ಟಡ

1955 (2600) ಶ್ರೀ ಕೃಷ್ಣಪ್ಪ ವಿ. : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲ್ಕುಂಟೆ ಆರೋಗ್ಯ ಕೇಂದ್ರದ ಕಟ್ಟಡದ ನಿರ್ಮಾಣ ಕಾರ್ಯಗಳಿಗೆ ಈವರೆಗೆ ಖರ್ಚಾದ ಹಣವೆಷ್ಟು? ಎಂದು ಪೂರ್ಣಗೊಳ್ಳಲಾಗುವುದು;

ಆ) ಈ ಆಸ್ಪತ್ರೆ ಮಂಜೂರಾದ ಹುದ್ದೆಗಳೆಷ್ಟು? ಖಾಲಿ ಹುದ್ದೆಗಳನ್ನು ಎಂದು ತುಂಬಲಾಗುವುದು?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ದೊಡ್ಡಬಳ್ಳಾಪುರ ತಾಲ್ಲೂಕು ಹುಲ್ಕುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಅಂದಾಜು ಮೊತ್ತ ರೂ.6.00 ಲಕ್ಷಗಳು.

ಒಟ್ಟು ಖರ್ಚು ರೂ.5.18 ಲಕ್ಷಗಳು. ಕಟ್ಟಡವು ಎಲ್ಲಾ ವಿಧದಲ್ಲಿ ಪೂರ್ಣಗೊಂಡಿರುತ್ತದೆ. ಆರೋಗ್ಯ ಇಲಾಖೆಗೆ ಪ್ರಭಾರವಹಿಸಬೇಕಿರುತ್ತದೆ.

ಅ)

ಮಂಜೂರಾದ ಹುದ್ದೆಗಳ ವಿವರ

ಹುದ್ದೆಯ ಹೆಸರು	ಮಂಜೂರು ಆಗಿರುವ ಹುದ್ದೆ	ಖಾಲಿ ಇರುವ ಹುದ್ದೆ
1) ವೈದ್ಯಾಧಿಕಾರಿಗಳು	1	1
2) ಫಾರ್ಮಾಸಿಸ್ಟ್	1	1
3) ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	1	1
4) ಕಿರಿಯ ಪುರುಷ ಆರೋಗ್ಯ ಸಹಾಯಕ	1	1
5) ಕ್ಲರ್ಕ್ ಕಂ ಟೈಪಿಸ್ಟ್	1	1
6) ಗ್ರೂಪ್-ಡಿ	1	1

ಖಾಲಿ ಇರುವ ಫಾರ್ಮಾಸಿಸ್ಟ್ ಮತ್ತು ಕಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಯನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ ಹುದ್ದೆಯನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಟೈಪಿಸ್ಟ್ ಕಂ ಕ್ಲರ್ಕ್ ಹುದ್ದೆಯನ್ನು ಇಲಾಖಾ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.

ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳು

1956 (1123) ಶ್ರೀ ಕಟ್ಟ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಶಾಲೆಗಳೆಷ್ಟು? ಅದರಲ್ಲಿ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿರುವ ಒಟ್ಟು ಪ್ರೌಢ ಶಾಲೆಗಳೆಷ್ಟು? ಅದರಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು;

ಇ) ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳಿಗೆ ಒಟ್ಟು ಎಷ್ಟು ಶಿಕ್ಷಕರ ಕೊರತೆ ಇದೆ;

ಈ) ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆಯೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಮತ್ತು ವಿದ್ಯುತ್ ಸರಬರಾಜು ಇದೆಯೆ;

ಉ) ಎಲ್ಲಾ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ, ಕುಡಿಯುವ ನೀರಿನ ಸೌಲಭ್ಯ ಹಾಗೂ ವಿದ್ಯುತ್ ಸರಬರಾಜು ಇದೆಯೇ?